ಪ್ರಬಂಧ



**ಬಿ.ಆರ್. ಲಕ್ಷ್ಮಣರಾವ್**

ಕಲೆ: ಪ್ರವೀಣ್ ಆಚಾರ್ಯ

# ಸ್ವಯಂವರ

ಇತ್ತೀಚೆಗೆ 'ದ್ರೌಪದಿ ಸ್ವಯಂವರ' ಎಂಬ ಯಕ್ಷಗಾನ ಪ್ರಸಂಗದ ಪ್ರದರ್ಶನಕ್ಕೆ ನನ್ನನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿತ್ತು. ಅಲ್ಲಿ ಸಂಪ್ರದಾಯದಂತೆ ನಾಲ್ಕು ಮಾತಾಡಲೆಂದು, ನಮ್ಮ ಪೌರಾಣಿಕ ಸ್ವಯಂವರಗಳ ಹಿನ್ನೆಲೆಯ ಮೇಲೆ ನಾನು ಕಣ್ಣಾಡಿಸಿದೆ. ಆಗ ಸಿಕ್ಕ ಮಾಹಿತಿಯ ಪ್ರಕಾರ–

ಪ್ರಾಚೀನ ಕ್ಷತ್ರಿಯ ರಾಜವಂಶಗಳಲ್ಲಿದ್ದ ವೈವಾಹಿಕ ಪದ್ಧತಿಗಳಲ್ಲಿ ಸ್ವಯಂವರವೂ ಸಹ ಒಂದು. ರಾಜಕುಮಾರಿಯು ಪ್ರಾಪ್ತವಯಸ್ಕಳಾದಾಗ ಅವಳ ತಂದೆ ಅಥವಾ ಪೋಷಕನು ಸ್ವಯಂವರವನ್ನು ಏರ್ಪಡಿಸುತ್ತಿದ್ದನು. ಲಾವಣ್ಯವತಿಯಾದ ಅವಳನ್ನು ವರಿಸಲು ಬಯಸುವ ಸುತ್ತಮುತ್ತಲಿನ ರಾಜಾಧಿರಾಜರು ಸ್ವಯಂವರಕ್ಕೆ ಆಮಂತ್ರಿತರಾಗಿ ಬರುತ್ತಿದ್ದರು. ಅವರಲ್ಲಿ ತನಗೆ ಮೆಚ್ಚುಗೆಯಾದವನಿಗೆ ವರಣಮಾಲೆ ತೊಡಿಸಿ ಅವನನ್ನು ತನ್ನ ಪತಿಯಾಗಿ ಅವಳು ವರಿಸಬಹುದಿತ್ತು. ಇದು ಸ್ವಯಂವರದ ಸ್ಥೂಲ ನಿಯಮ. ಆದರೆ, ನಿಜಕ್ಕೂ ಆ ಕ್ಷತ್ರಿಯ ಕನ್ಯೆಗೆ ತಾನು ಇಷ್ಟಪಟ್ಟವನನ್ನು ವರಿಸುವ ಸ್ವಾತಂತ್ರ್ಯವಿತ್ತೆ?

ಮೊದಲಿಗೆ ತ್ರೇತಾಯುಗದ 'ಸೀತಾ ಸ್ವಯಂವರ'ವನ್ನೇ ತೆಗೆದುಕೊಳ್ಳೋಣ. ಜನಕ ಮಹಾರಾಜನು ತನ್ನ ಸಾಕುಮಗಳಾದ ಸೀತೆಗೆ ಮಿಥಿಲೆಯಲ್ಲಿ ಸ್ವಯಂವರವನ್ನು ಏರ್ಪಡಿಸಿದಾಗ, ವಿಶ್ವಾಮಿತ್ರ ಋಷಿಯು ರಾಮ ಲಕ್ಷ್ಮಣರನ್ನು ಅಲ್ಲಿಗೆ ಕರೆತಂದನಲ್ಲವೆ? ಆಗ ಅವರ ವಯಸ್ಸು ಎಷ್ಟಾಗಿರಬಹುದು? ಬಹುಶಃ ಹದಿಹರೆಯ. ಇನ್ನು ಸೀತೆಗಂತೂ ಎಂಟೋ ಹತ್ತೋ ವರ್ಷವಿದ್ದೀತು. ಈಗಿನ ಮಟ್ಟಿಗೆ ಅದು ವಿವಾಹಕ್ಕೆ ಅಪ್ರಾಪ್ತ ವಯಸ್ಸು. ಜೊತೆಗೆ ಅದು ಹೆಸರಿಗೆ ಮಾತ್ರ ಸ್ವಯಂವರವಾಗಿತ್ತೇ ವಿನಹ ಅಲ್ಲಿ ಸೀತೆಗೆ ಯಾವುದೇ ಆಯ್ಕೆಯ ಸ್ವಾತಂತ್ರ್ಯವಿರಲಿಲ್ಲ. ಶಿವಧನುಸ್ಸನ್ನು ಎತ್ತಿ, ಅದಕ್ಕೆ ಹೆದೆಯೇರಿಸುವ ಪಣ ಮುಖ್ಯವಾಗಿತ್ತು. ಪಣದಲ್ಲಿ ಗೆದ್ದವನಿಗೆ ಸೀತೆ ಬಹುಮಾನವಾಗಿದ್ದಳಷ್ಟೇ. ಆದ್ದರಿಂದ ನಿಜಾರ್ಥದಲ್ಲಿ ಅದು ಸ್ವಯಂವರವಾಗಿರಲಿಲ್ಲ. ಜೊತೆಗೆ, ಶ್ರೀರಾಮನು ಶಿವಧನುಸ್ಸನ್ನು ಎತ್ತಿ, ಅದಕ್ಕೆ ಹೆದೆಯೇರಿಸಿದಾಗ ಅದು ತಾನಾಗಿ ಮುರಿಯಿತೆ ಅಥವಾ ಶ್ರೀರಾಮನು ಬೇಕೇಂದೇ ಅದನ್ನು ತಾನೇ ಮುರಿದನೇ? ಸ್ಪರ್ಧೆಯಲ್ಲಿ ಅವನೇ ಕೊನೆಯ ಅಭ್ಯರ್ಥಿಯೇ ಅಥವಾ ಇನ್ನೂ ಕೆಲವರಿದ್ದರೆ? ಒಂದು ವೇಳೆ ಇದ್ದಿದ್ದಲ್ಲಿ ಅವರು ಅವಕಾಶವಂಚಿತರಾದಂತಾಗಲಿಲ್ಲವೆ? ಇಂತಹ ಧರ್ಮಸೂಕ್ಷ್ಮದ ಪ್ರಶ್ನೆಗಳು ಆಗೇಕೆ ಉದ್ಭವಿಸಲಿಲ್ಲ ಎಂಬ ಯೋಚನೆಗಳು ನನಗೀಗ ಮೂಡುತ್ತಿವೆ.

ಇನ್ನು ದ್ವಾಪರಯುಗದ 'ದ್ರೌಪದಿ ಸ್ವಯಂವರ'ದ ಪ್ರಕರಣಕ್ಕೆ ಬರೋಣ. ಇದು ನಿಯಮಾನುಸಾರವಾಗಿಯೇ ಪ್ರಾರಂಭವಾಗುತ್ತದೆ. ಮೊದಲಿಗೆ ದ್ರೌಪದಿಯ ಸಹೋದರನಾದ ದೃಷ್ಟದ್ಯುಮ್ನನು ಅಲ್ಲಿ ನೆರೆದಿದ್ದ ಕುರುಕುಲ